

೧೮ ಕನ್ನಡ ಸಿನಿಮಾ

## ಪುನೀತ್: ಎಂದೂ ಮರೆಯದ ನಗು

ಆಯಾಮ ಒಂಬತ್ತು

**ಕನ್ನಡ** ಜನಮಾನಸವನ್ನು ರಾಜಕುಮಾರ್‌ರಷ್ಟೇ ಗಾಢವಾಗಿ ಪ್ರಭಾವಿಸಿದವರು ಪುನೀತ್ ರಾಜ್‌ಕುಮಾರ್ (1975–2021). 'ಬೆಟ್ಟದ ಹೂವು' ಚಿತ್ರದಲ್ಲಿ ಬಾಲನಟನಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದ ಈ ನಟನ ಸಿನಿಮಾಗಳು ಮಾತ್ರವಲ್ಲ, ಜೀವನ ಕೂಡ ಜನರನ್ನು ಪ್ರಭಾವಿಸಿತ್ತು ಎನ್ನುವುದು ಅವರ ನಿಧನಾನಂತರ ಸ್ಪಷ್ಟವಾಯಿತು. 2021ರ ಅಕ್ಟೋಬರ್ 29ರಂದು ಪುನೀತ್ ಅಕಾಲಿಕ ಮೃತ್ಯುವಿಗೆ ಈಡಾದಾಗ ನಾಡಿನಲ್ಲಿ ಕವಿದ ಶೋಕದ ವಾತಾವರಣ ಅಚ್ಚರಿ ಹುಟ್ಟಿಸುವಂತಿತ್ತು. ಸಿನಿಮಾಗಳ ಮೂಲಕ ಯುವಜನರ ನೆಚ್ಚಿನ ಐಕಾನ್ ಆಗಿದ್ದ ಪುನೀತ್, ಸಿನಿಮಾದಾಚೆಗೂ ತಮ್ಮ ನಡೆ–ನುಡಿ ಹಾಗೂ ಸಾಮಾಜಿಕ ಕಾಳಜಿಯಿಂದ ಜನಸಾಮಾನ್ಯರ ಹೃದಯದಲ್ಲಿ ಸದ್ದಿಲ್ಲದೆ ಸ್ಥಾನ ಪಡೆದುಕೊಂಡಿದ್ದರು.

'ಬೆಟ್ಟದ ಹೂವು', 'ಭಾಗ್ಯವಂತ', 'ಯಾರಿವನು', 'ಚಲಿಸುವ ಮೋಡಗಳು', 'ಭಕ್ತ ಪ್ರಹ್ಲಾದ' ಸಿನಿಮಾಗಳ ಮೂಲಕ ಬಾಲನಟನಾಗಿ ಪ್ರಸಿದ್ಧರಾಗಿದ್ದ ಪುನೀತ್, 'ಅಪ್ಪು' (2002) ಚಿತ್ರದ ಮೂಲಕ ನಾಯಕನಟನಾಗಿ ಎರಡನೇ ಇನಿಂಗ್ಸ್ ಆರಂಭಿಸಿದರು. ನಂತರದ 'ಅಭಿ', 'ಆಕಾಶ್', 'ಅರಸು', 'ಮಿಲನ' – ಎಲ್ಲವೂ ಜನಪ್ರಿಯಗೊಂಡವು. 'ಜಾಕಿ', 'ಅಣ್ಣಾಬಾಂಡ್' ಚಿತ್ರಗಳು ಪುನೀತ್ ವರ್ಚಸ್ಸಿಗೆ ಸಾಣೆ ಹಿಡಿದವು. 'ಪೃಥ್ವಿ', 'ಮೈತ್ರಿ', 'ಪರಮಾತ್ಮ', 'ರಾಜ್‌ಕುಮಾರ' ರೀತಿಯ ಸಿನಿಮಾಗಳು ನಟನಾಗಿ ಪುನೀತ್‌ರ ಪ್ರಯೋಗಶೀಲತೆಗೆ ಉದಾಹರಣೆಯಂತಿದ್ದವು. ಅವರ ಸಾವಿನ ನಂತರ ತೆರೆಕಂಡ 'ಗಂಧದಗುಡಿ' ಡಾಕ್ಯುಸಿನಿಮಾ ಕೂಡ ನಟನಾಗಿ, ಸಿನಿಮಾ ನಿರ್ಮಾತೃವಾಗಿ ಪುನೀತ್ ನಡೆಸಿದ ವಿಶಿಷ್ಟ ಹುಡುಕಾಟದಂತಿತ್ತು. ಪ್ರಯೋಗಶೀಲ ನಿರ್ದೇಶಕರು, ಮಹತ್ವಾಕಾಂಕ್ಷೆಯ ನಿರ್ಮಾತೃಗಳು ಹಂಬಲಿಸುವ ಕಲಾವಿದನಾಗಿ ಪುನೀತ್ ತಮ್ಮನ್ನು ರೂಪಿಸಿಕೊಂಡಿದ್ದರು. ಆಕರ್ಷಕ ಮೈಕಟ್ಟು, ಮೋಹಕ ಚಲನೆಯ ನೃತ್ಯದಿಂದ ಯುವಜನರನ್ನು ಸೆಳೆದಿದ್ದ ಪುನೀತ್, ತಮ್ಮ ಮಂದಹಾಸದ ಮೂಲಕ ಎಲ್ಲ ವಯೋಮಾನದವರ



ಫೈರ್‌ಬ್ರಾಂಡ್ ದರ್ಶನ್